# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೇಂದ್ರ ಪುರಸ್ಕೃತ ಮೀನುಗಾರರ ಸಾಮೂಹಿಕ ಅಪಘಾತ ವಿಮಾ ಯೋಜನೆಯನ್ನು 2010-11ನೇ ಸಾಲಿನಲ್ಲಿ ಮುಂದುವರೆಸಲು ವಿಮಾ ಕಂತು ಬಿಡುಗಡೆಗೊಳಿಸುವ ಬಗ್ಗೆ.

ಓದಲಾಗಿದೆ:- (1) ಆದೇಶ ಸಂಖ್ಯೆ:ಪಸಂಮೀ/65/ಮೀಇಂಯೋ/2010 ದಿನಾಂಕ:08-04-2010.
(2) ಪತ್ರ ಸಂಖ್ಯೆ:12035/2/2007-FY(WU) ದಿನಾಂಕ:16-04-2010.
(3) ಪತ್ರ ಸಂಖ್ಯೆ:ಮೀಸಾಕ/55/2010-11 ದಿನಾಂಕ:06-09-2010.

12133
ಮೀಸಾಕ
12/11/10

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ಮೀನುಗಾರಿಕೆ ಇಲಾಖೆಯ ಚಾಲ್ತಿಯಲ್ಲಿರುವ ರಾಜ್ಯ ಮಟ್ಟದ ಯೋಜನೆಗಳನ್ನು, ಕೇಂದ್ರ ಪುರಸ್ಕೃತ ಯೋಜನೆಗಳನ್ನು ಹಾಗೂ ಎನ್.ಸಿ.ಡಿ.ಸಿ. ನೆರವಿನ ಯೋಜನೆಗಳನ್ನು 2010-2011ನೇ ಸಾಲಿಗೂ ಮುಂದುವರಿಸಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಭಾರತ ಸರ್ಕಾರದ ಪತ್ರದಲ್ಲಿ ಕೇಂದ್ರ ಪುರಸ್ಕೃತ ಮೀನುಗಾರರ ಸಾಮೂಹಿಕ ಅಪಘಾತ ವಿಮಾ ಯೋಜನೆಯನ್ನು 2010-11ನೇ ಸಾಲಿಗೂ ಮುಂದುವರಿಸಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆರವರ ಪತ್ರದಲ್ಲಿ ಮೀನುಗಾರಿಕೆ ವೃತ್ತಿಯಲ್ಲಿ ಜೀವಹಾನಿ ಸಂಭವಿಸುವ ಸಾಧ್ಯತೆಗಳು ಹೆಚ್ಚಿರುತ್ತವೆ. ಆ ರೀತಿ ಮೀನುಗಾರರು ಸಂಕಷ್ಟಗಳಿಗೆ ಒಳಗಾದ ಸಂದರ್ಭಗಳಲ್ಲಿ ಅವರಿಗೆ ವಿಮೆ ಸೌಲಭ್ಯ ನೀಡಲಾಗುತ್ತಿದ್ದು, ಮರಣ ಹೊಂದಿದ ಮತ್ತು ಪೂರ್ಣ ಅಂಗವಿಕಲರಾದ ಮೀನುಗಾರರ ಕುಟುಂಬದವರಿಗೆ ರೂ.1.00ಲಕ್ಷ ಹಾಗೂ ಆಂಶಿಕ ಅಂಗವಿಕಲರಾದವರಿಗೆ ರೂ.50,000-00ಗಳ ವಿಮಾ ಸೌಲಭ್ಯ ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ 2010-11ನೇ ಸಾಲಿಗೆ ಸದರಿ ಯೋಜನೆಯನ್ನು ಮುಂದುವರೆಸುವುದು ಅವಶ್ಯಕವಾಗಿರುತ್ತದೆ ಎನ್ನುತ್ತ, ಈ ದಿಸೆಯಲ್ಲಿ ಪ್ರತೀ ಮೀನುಗಾರರಿಗೆ ವಾರ್ಷಿಕ ವಿಮಾ ಕಂತು ರೂ.30.00 ರಂತೆ 1,20,000 ಕಾರ್ಯನಿರತ ಮೀನುಗಾರರಿಗೆ ಒಟ್ಟು ವಾರ್ಷಿಕ ವಿಮಾ ಕಂತು ರೂ.36.00 ಲಕ್ಷಗಳಾಗುತ್ತದೆ ಮತ್ತು ಈ ವಿಮಾ ಕಂತನ್ನು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ತಲಾ 50:50ರ ಅನುಪಾತದಲ್ಲಿ ಭರಿಸುತ್ತವೆ ಎನ್ನುತ್ತ, ಈ ಸಂಬಂಧ ರಾಜ್ಯದ ಪಾಲಿನ ಕಂತು ಒಟ್ಟು ರೂ.18.00 ಲಕ್ಷಗಳನ್ನು ರಾಷ್ಟ್ರೀಯ ಮೀನುಗಾರರ ಸಹಕಾರ ಸಂಘಗಳ ಮಹಾಮಂಡಳಿ ನಿಯಮಿತ, ನವದೆಹಲಿ ಇವರಿಗೆ ನೀಡಬೇಕಾಗಿದ್ದು, ಸದರಿ ಹಣ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ:ಪಸಂಮೀ/217/ಮೀಇಯೋ/2010, ಬೆಂಗಳೂರು ದಿನಾಂಕ:11-11-2010**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕೇಂದ್ರ ಪುರಸ್ಕೃತ ಮೀನುಗಾರರ ಸಾಮೂಹಿಕ ಅಪಘಾತ ವಿಮಾ ಯೋಜನೆಯಡಿ 2010-11ನೇ ಸಾಲಿನ ರಾಜ್ಯದ ಪಾಲಿನ ವಿಮಾ ಕಂತು ರೂ.18.00 ಲಕ್ಷಗಳನ್ನು (ಹದಿನೆಂಟು ಲಕ್ಷ ರೂಪಾಯಿಗಳು ಮಾತ್ರ) ಬಿಡುಗಡೆಗೊಳಿಸಲಾಗಿದೆ.

ಸದರಿ ಮೊತ್ತವನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರು ರಾಜ್ಯ ಹುಜೂರು ಖಜಾನೆಯಿಂದ ಪೇಯೀಸ್ ರಶೀದಿ ಮೂಲಕ ಪಡೆದು ಬ್ಯಾಂಕಿನ ಡಿಮ್ಯಾಂಡ್ ಡ್ರಾಫ್ಟ್ ಮುಖಾಂತರ ಕಾರ್ಯನಿರ್ವಾಹಕ ನಿರ್ದೇಶಕರು, ರಾಷ್ಟ್ರೀಯ ಮೀನುಗಾರರ ಸಹಕಾರ ಸಂಘಗಳ ಮಹಾಮಂಡಳಿ ನಿಯಮಿತ, ನವದೆಹಲಿ ಇವರಿಗೆ ಪಾವತಿಸಲು ಅನುಮತಿ ನೀಡಿದೆ.

ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ “2405-ಮೀನುಗಾರಿಕೆ-00-120-ಮೀನುಗಾರಿಕೆ ಸಹಕಾರಿ ಸಂಸ್ಥೆಗಳು-0-07-ಮೀನುಗಾರರ ಕಲ್ಯಾಣ-106-ಸಹಾಯಧನ (ಕೇಂದ್ರ ಪುರಸ್ಕೃತ ಯೋಜನೆ)” ಅಡಿಯಲ್ಲಿ 2010-11ನೇ ಸಾಲಿನಲ್ಲಿ ಒದಗಿಸಿರುವ ರಾಜ್ಯದ ಪಾಲು ರೂ.18.00 ಲಕ್ಷಗಳ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ/9/ಟಿಎಫ್‌ಪಿ/2004 ದಿನಾಂಕ:17-08-2004ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

12/11/10
(ಡಿ.ಎಂ.ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

**ಇವರಿಗೆ:**

1) ಮಹಾಲೇಖಪಾಲರು (ಲೆಕ್ಕ ಪತ್ರ)(ಆಡಿಟ್-1 ಮತ್ತು 2), ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ಜಂಟಿ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
4) ಕಾರ್ಯನಿರ್ವಾಹಕ ನಿರ್ದೇಶಕರು, ರಾಷ್ಟ್ರೀಯ ಮೀನುಗಾರರ ಸಹಕಾರ ಸಂಘಗಳ ಮಹಾಮಂಡಳಿ ನಿಯಮಿತ, ನವದೆಹಲಿ.
5) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
7) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8) ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿಗಳು.